ಓ ಎಸ್ **88/2014**

ಪಿ ಡಬ್ಲ್ಯೂ ಃ**2**

ದಿಃ **28-06-2018**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಶ್ರೀ ಆರ್ ಬಿ ಪಿ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ವಾದಿ ಪರ ಸಾಕ್ಷೀದಾರನಿದ್ದು, ನನ್ನ ಮುಖ್ಯ ಸಾಕ್ಷಿಗನುಗುಣವಾಗಿ ನ್ಯಾಯಾಲಯಕ್ಕೆ ಈಗ ನನ್ನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ಸಂಗತಿಗಳು ನನ್ನ ತಿಳುವಳಿಕೆ , ನಂಬಿಕೆ ಮತ್ತು ಮಾಹಿತಿ ಮೇರೆಗೆ ಸರಿ ಇರುತ್ತದೆ.

ತುಳಸಾಬಾಯಿ ಬರೆದುಕೊಟ್ಟ ಮರಣ ಶಾಸನ ಪತ್ರದಲ್ಲಿನ ನನ್ನ ಹಾಗೂ ಸಾಕ್ಷೀದಾರರ ಸಹಿಗಳನ್ನು ನೋಡಿದರೆ ಗುರುಸುತ್ತೇನೆ. ಸಾಕ್ಷಿ ಗುರುಜತಿಸಿದ ಸಹಿಯನ್ನು ನಿಪಿ - 18 (ಎ) ಎಂದು ಗುರುತಿಸಲಾಯಿತು.

ರಾಣಾಬಾ ಗಾವಡು ಕೆಕೆಳೋಜಿ ಇವರ ಸಹಿಯನ್ನು ನೋಡಿದರೆ ಗುರುಸುತ್ತೇನೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ - 18 (ಡಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ತುಳಸಾಬಾಯಿ ಹೆಬ್ಬಟ್ಟಿನ ಗುರುತನ್ನು ಹಾಕಿದ್ದಾರೆ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ವಿ ಜೆ ವಕೀಲರಿಂದಃ

ವಾದಿ ಮತ್ತು ಪ್ರತಿವಾದಿಯರ ವಂಶಾವಳಿ ಕುರಿತು ಮಾಹಿತಿ ಇದೆ. ವಾದಿಯ ಅಜ್ಜನ ಹೆಸರು ಬಾಹುಕಣ್ಣ ಇರುತ್ತದೆ. ಯಲ್ಲಪ್ಪ ಇವರಿಗೆ ಯಾವ ಯಾವ ಸರ್ವೆ ನಂಬರನಲ್ಲಿ ಎಷ್ಟು ಜಮೀನು ಇದೆ ಎಂದು ಹೇಳಲು ಆಗುವುದಿಲ್ಲ. ಯಲ್ಲಪ್ಪ ಯಾವಾಗ ಮರಣ ಹೊಂದಿದ್ದಾನೆಂದು ಹೇಳಲು ಆಗುವುದಿಲ್ಲ. ಯಲ್ಲಪ್ಪನ ಮರಣದ ನಂತರ 1 ನೇ ವಾದಿ ಯಲ್ಲಪ್ಪಗೆ ಸೇರಿದ ಸ್ವತ್ತುಗಳ ವಾರಸಾ ಪ್ರಕಾರ ಖಾತೆ ಮಾಡಿಕೊಂಡಿರುವುದು ನನಗೆ ಗೊತ್ತಿಲ್ಲ. ಈ ಕುರಿತಾದ ಉತಾರಗಳನ್ನು ನಾನು ನೋಡಿಲ್ಲ. 1 ನೇ ವಾದಿ ಯಾವುದಾದರೂ ಆಸ್ತಿಗಳನ್ನು ಪರಬಾರೆ ಮಾಡಿರುವುದು ನನಗೆ ಗೊತ್ತಿಲ್ಲ. ವಾದಿಗೆ ಊರಲ್ಲಿ ಒಂದು ಮನೆ ಇತ್ತು ಎಂದರೆ ಸರಿ . ವಾದಿ ಮತ್ತು ಪ್ರತಿವಾದಿಯ ತಂದೆ ಶಿವಾಜಿ ಲೋಹಾರ ಇವರಿಗೆ ಒಂದು ಮನೆ ಮಾರಾಟ ಮಾಡಿದ್ದಾರೆ. ವಾದಿ ಮತ್ತು ಪ್ರತಿವಾದಿಯ ತಂದೆ ಜೊತೆಯಾಗಿ ಮನೆ ಮಾರಿದ ಬಗ್ಗೆ ನಾನು ದಾಖಲೆ ನೋಡಿಲ್ಲ. ಇವರು ಮಾರಿದ ಮನೆಯಲ್ಲಿ ಶಿವಾಜಿ ಲೋಹಾರ ವಾಸ ವಿದ್ದಾನೆ ಎಂದರೆ ಸರಿ. 1 ನೇ ಪ್ರತಿವಾದಿ ತಂದೆ ತನ್ನ ಮನೆ ಮಾರಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿ ತಂದೆ ಮಾರಾಟ ಮಾಡಿರುವ

ಓ ಎಸ್ 88/2014
ಪಿ ಡಬ್ಲ್ಯೂ:2

ದಿಃ 28-06-2018

ಮನೆಯಲ್ಲಿ ದತ್ತಾ ಕೋಕಿತಕರ ಹಾಗೂ ಭರ್ಮಾ ಕೊಕಿತಕರ ವಾಸವಿದ್ದಾರೆ ಎಂದರೆ ಸರಿ. ಈಃ ರಿತೀ ಸದರಿ ಯವರು ಕಳೆದ 25 – 30 ವರ್ಷಗಳಿಂದ ವಾಸವಿದ್ದಾರೆ. ನಾನು ಪಂಚಾಯಿತಿ ಸದಸ್ಯನಿದ್ದೇನೆ. 1 ನೇ ಪ್ರತಿವಾದಿ ತಂದೆ ಮಾತ್ರ ಮನೆಯನ್ನು ದತ್ತಾ ಕೊಕಿತಕರ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಇಬ್ಬರು ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ.

ದಾವಾ ಜಮೀನುಗಳು ವಾದಿ ಮತ್ತು ಪ್ರತಿವಾದಿ ಇವರ ಕುಟುಂಬಕ್ಕೆ ಹೇಗೆ ಬಂದಿವೆ ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ವಾಸವಿರುವ ಮನೆಗಳು ಬೇರೆ ಬೇರೆ ಎಂದರೆ ಸರಿ . 1 ನೇ ಪ್ರತಿವಾದಿ 10 – 15 ವರ್ಷಗಳಿಂದ ಹೊಸ ಮನೆಯಲ್ಲಿ ಇದ್ದಾನೆ. ಸದರಿ ಮನೆಗೆ ವಿದ್ಯುತ್ತ ಸಂಪರ್ಕ 1 ನೇ ಪ್ರತಿವಾದಿ ತಂದೆಯ ಹೆಸರಿನಲ್ಲಿ ಪಡೆಯಲಾಗಿದೆ. ಸದರಿ ಮನೆಗೆ ನದಿಯಿಂದ ನೀರಿನ ಸಂಪರ್ಕ ಪಡೆಯಲಾಗಿದೆ ಎಂದರೆ ಸಾಕ್ಷಿಯು ಪಂಚಾಯಿತಿ ನಳ ಇದೆ ಎಂದು ಹೇಳುತ್ತಾರೆ. ವಾದಿ ಮತ್ತು ಪ್ರತಿವಾದಿಯರು ಬೇರೆ ಬೇರೆಯಾಗಿ ತಮ್ಮ ಜಮೀನುಗಳನ್ನು ಸಾಗು ಮಾಡುತ್ತಾರೆ ಎಂದರೆ ಸರಿಯಲ್ಲ. ವಾದಿಯ ಹೆಸರಿಗೆ ನೀರಾವರಿ ಮೂಲ ಹೊಂದಿರುವ ಜಮೀನುಗಳು ಇರುವುದಿಲ್ಲ. ಆದೇ ರೀತಿ ವಾದಿಯು ಪಂಪಸೇಟ ಹೊಂದಿರುವುದಿಲ್ಲ. 1 ನೇ ಪ್ರತಿವಾದಿ ನದಿಗೆ ಪಂಪಸೇಟ ಅಳವಡಿಸಿದ್ದಾನೆ ಎಂದರೆ ಸಾಕ್ಷಿಯು ಇಬ್ಬರೂ ಸೇರಿ ಅಳವಡಿಸಿದ್ದಾರೆ ಎಂದು ಹೇಳುತ್ತಾರೆ. ಇಬ್ಬರೂ ಸೇರಿ ಪಂಪಸೇಟ ಅಳವಡಿಸಿದ್ದಾರೆ ಎನ್ನುವ ದಾಖಲೆಗಳನ್ನು ನಾನು ನೋಡಿಲ್ಲ. 1 ನೇ ಪ್ರತಿವಾದಿ ಮಾತ್ರ ಕಬ್ಬು ಬೆಳೆಸುತ್ತಾನೆ ಎಂದರೆ ಸಾಕ್ಷಿಯು ಇಬ್ಬರೂ ಸೇರಿ ಬೆಳೆಯುತ್ತಾರೆ ಎಂದು ಹೇಳುತ್ತಾರೆ. ವಾದಿಯ ಹೆಸರಿನಲ್ಲಿ ಸಂಕೇಶ್ವರ ಸಕ್ಕರೆ ಕಾರ್ಖಾನೆಗೆ ಕಬ್ಬು ಹೋಗಿದೆ ಆದರೆ ಯಾವ ವರ್ಷ ಎಂದು ನನಗೆ ಹೇಳಲು ಆಗುವುದಿಲ್ಲ. 1 ನೇ ಪ್ರತಿವಾದಿ ಹೆಸರಿಗೆ ಕಬ್ಬು ಹೋಗುತ್ತಿದೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಮಾತ್ರ ಸಂಕೇಶ್ವರ, ಬೆಲ್ಲದ ಬಾಗೇವಾಡಿ ಹಾಗೂ ಹೇಮರಸ ಸಕ್ಕರೆ ಕಾರ್ಹಾನೆಗೆ ಕಬ್ಬು ಹೊಡೆಯುತ್ತಾನೆ ಎಂದರೆ ಸಾಕ್ಷಿಯು ಇಬ್ಬರೂ ಸೇರಿ ಹೊಡೆಯುತ್ತಾರೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ತಂದೆ ತಾನೂ ಬದುಕಿರುವಾಗ ವಾದಿಯ ವಿರುದ್ಧ ದಾವೆ ಮಾಡಿದ ಕುರಿತು ನನಗೆ ಮಾಹಿತಿ ಇಲ್ಲ. ಸಾಕ್ಷಿಯು ಈ ರೀತಿ ದಾವೆ ಮಾಡಿಲ್ಲ ಎಂದು ಹೇಳುತ್ತಾರೆ. 1 ನೆ ಪ್ರತಿವಾದಿ ತಂದೆ ಗೌರಾಬಾಯಿ ಲಕ್ಕು ಎನ್ನುವವರ ವಿರುದ್ಧ ದಾವೆ ಸಲ್ಲಿಸಿರುವ ಕುರಿತು ಗೊತ್ತಿಲ್ಲ. ವಾದಿಯ ತಂದೆ ಬದುಕಿರುವಾಗಲೇ ಪ್ರತಿವಾದಿಯ ತಂದೆ ಮತ್ತು

ಓ ಎಸ್ 88/2014
ಪಿ ಡಬ್ಲ್ಯೂ:2

ದಿಃ 28-06-2018

ಅವರ ಸಹೋದರರು ಬೇರೆಯಾಗಿ ತಮ್ಮ ಹಿಸ್ಸೆಗಳನ್ನು ಮಾಡಿ ಕೊಂಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪರತಿವಾದಿ ತನ್ನ ತಂದೆಯ ಮರಣದ ಬಳಿಕ ವರದಿ ಕೊಟ್ಟು ಜಮೀನುಗಳ ಉತಾರಗಳಲ್ಲಿತನ್ನ ಹಸೆರು ದಾಖಲಿಸಿಕೊಂಡಿದ್ದಾರೆ ಎಂದರೆ ಸರಿ.

ತುಳಸಾಬಾಯಿ ಇವರು ವಾದಿಯ ಜೊತೆ ಇರುತ್ತಿದ್ದರು. ತುಳಸಾ ಬಾಯಿ ಮರಣ ಹೊಂದುವ ಕಾಲಕ್ಕೆ 85 – 86 ವರ್ಷ ವಯಸ್ಸಾಗಿತ್ತು. ಸದರಿ ತುಳಸಾ ಬಾಯಿ ಇವರು ಅಸ್ತಮಾ ಕಾಯಿಲೆಯಿಂದ ಬಳುತ್ತಿದ್ದರು ಎಂದರೆ ಸರಿ . ತುಳಸಾ ಬಾಯಿ ವಯೋವೃದ್ಧರಾಗಿರುವ ಕಾರಣ ವರ್ಷ ವರ್ಷ ಅವಳ ಆರೋಗ್ಯದಲ್ಲಿ ಕ್ಷೀಣವಾಗುತ್ತಿತ್ತು ಎಂದರೆ ಸರಿ. ತುಳಸಾಬಾಯಿ ಸಾಯುವ 3 ವರ್ಷಗಳ ಮೊಲಿನಿಂದಲೂ ವೈದ್ಯರಲ್ಲಿ ಚಿಕಿತ್ಸೆಪಡೆಯುತ್ತಿದ್ದರು ಎಂದರೆ ಸರಿಯಲ್ಲ.

ತುಳಸಾ ಬಾಯಿ ಇವರಿಗೆ ಓದು ಬರಹ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ತುಳಸಾಬಾಯಿ ತಾನೂ ಸಾಯುವ ಪೂರ್ವದಲ್ಲಿ ತನ್ನ ಜೀವನದಲ್ಲಿ ಮುಂದೆ ಎನೂ ಆಗುತ್ತದೆ ಎನ್ನುವ ಬಗ್ಗೆ ನಂಬಿಕೆ ಮತ್ತು ವಿಶ್ವಾಸ ಕಳೆದುಕೊಂಡಿದ್ದರು ಎಂದರೆ ಸರಿ. ತುಳಸಾ ಬಾಯಿ ತಾನೂ ಎನೂ ಮಾಡುತ್ತಿದ್ದೇನೆ ಎಂಬುದು ಅವರಿಗೆ ತಿಳಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ - 18 ನ್ನು ನಾನು ಓದಿ ನೋಡಿದ್ದೇನೆ. ನಿಪಿ - 18 ರಲ್ಲಿ ತುಳಸಾಬಾಯಿಗೆ ಅಸ್ತಮಾ ಕಾಯಿಲೆ ಇತ್ತು ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ನನಗೆ ಕನ್ನಡ ಓದು ಬರುತ್ತದೆ ಆದರೆ ಮಾತನಾಡಲು ಬರುವುದಿಲ್ಲ. ನಿಪಿ - 18 ಬರೆಯುವ 2 ದಿನಗಳ ಮೊದಲು ತುಳಸಾ ಬಾಯಿ ನಮ್ಮ ಗ್ರಾಮದಲ್ಲಿ ಈ ಬಗ್ಗೆ ನನಗೆ ಹೇಳಿದ್ದಳು. ಈ ಕುರಿತು ಸ್ಟಾಂಪ ಪೇಪರ ಖರೀದಿಸಿದ್ದರ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷಿಯು ಪುನಃ ಸ್ಟಾಂಪ ಪೇಪರ ಮೇಲೆ ಬರೆದಿದ್ದಾರೆ ಎಂದು ಹೇಳುತ್ತಾರೆ. ಸ್ಟಾಂಪ ಪೇಪರ ನ ಮೌಲ್ಯ ನೆನಪಿಲ್ಲ. ನಿಪಿ - 18 ನ್ನು ಬರೆಯಲು ತುಳಸಾ ಬಾಯಿ ಮಾಹಿತಿ ಕೊಟ್ಟರು. ತುಳಸಾ ಬಾಯಿ ವಕೀಲರಿಗೆ ಮಾಹಿತಿ ಕೊಟ್ಟರು. ನಿಪಿ - 18 ನ್ನು ಬರೆಯವ ಕಾಲಕ್ಕೆ ವಾದಿ ಮತ್ತು ಪ್ರತಿವಾದಿ ನಡುವೆ ದಾವೆ ಚಾಲ್ತಿಯಲ್ಲಿತ್ತು . ನಿಪಿ - 18 ಬರೆದ ದಿನಾಂಕ ನೆನಪಿಲ್ಲ ಆದರೆ 2012 ರಲ್ಲಿ ಬರೆದಿದ್ದಾರೆ. ನಿಪಿ -18 ನ್ನು ಸಂಕೇಶ್ವರದಲ್ಲಿ ಬರೆದರು. ಸದರಿ ದಾಖಲೆಯನ್ನು ಹುಕ್ಕೇರಿಯ ನೋಂದಾಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿ ಮಾಡಿಸಿದೇವು. ನಿಪಿ - 18 ನ್ನು ಬರೆಯುವ ಕಾಲಕ್ಕೆ ವಾದಿ ಇರಲಿಲ್ಲ. ನಿಪಿ - 18 ನ್ನು ಬರೆಯವ ಕಾಲಕ್ಕೆ ಜಮೀನಿನ ಉತಾರ ಮಾತ್ರ ತೆಗೆದುಕೊಂಡು ಹೋಗಿದ್ದೇವು. ನಿಪಿ - 18 ರಲ್ಲಿ ಮನೆ ಮತ್ತು ಖಾಲಿ ಜಾಗೆದ ಕುರಿತು ಉಲ್ಲೇಖ

ಓ ಎಸ್ **88/2014**
ಪಿ ಡಬ್ಲ್ಯೂ**:2**

ದಿಃ **28-06-2018**

ಇಲ್ಲ . ತುಳಸಾ ಬಾಯಿ ಇವರಿಗೆ ಮೃತ್ಯು ಪತ್ರ ಮಾಡಲು ತಿಳಿಯುತ್ತಿರಲಿಲ್ಲ , ಆದರೆ ಗೈರು ಪಾಯಿದೆ ತೆಗೆದುಕೊಂಡು ನಾವು ನಿಪಿ - 18 ನ್ನು ಸೃಪ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ತುಳಸಾ ಬಾಯಿ ಮತ್ತು ವಾದಿ ಜೊತೆಗೆ ಇದ್ದರೂ 1 ನೇ ವಾದಿ ನಿಪಿ - 18 ನ್ನು ಬರೆಯುವ ಕಾಲಕ್ಕೆ ಏಕೆ ಬಂದಿರಲಿಲ್ಲ ಎನ್ನುವ ಬಗ್ಗೆ ಮಾಹಿತಿ ಇಲ್ಲ. 1 ನೇ ವಾದಿ , ನಾನು , ಕೆಳೋಜಿ ಹಾಗೂ ವಕೀಲರು ನಿಪಿ - 18 ನ್ನು ಸೃಪ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ನನ್ನ ಜಮೀನು ನಮ್ಮ ಗ್ರಾಮದ ಪೂರ್ವ ದಿಕ್ಕಿನಲ್ಲಿ ಇದೆ. ದಾವಾ ಆಸ್ತಿಗಳು ದಡ್ಡಿ ಹಾಗೂ ಸಲಾಮವಾಡಿ ರಸ್ತೆಗೆ ಹೊಂದಿಕೊಂಡಿವೆ ಎಂದರೆ ಸರಿ. ತುಳಸಾ ಬಾಯಿ ನಿಪಿ - 18 ರಂತೆ ದಾಖಲೆ ಬರೆದುಕೊಡದೇ ಇದ್ದರೂ ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಗ್ರಾಮದ ಹಲವಾರು ಪ್ರಕರಣಗಳಲ್ಲಿ ಸಾಕ್ಷಿ ಹೇಳಿಲ್ಲ ಆದರೆ 2 -3 ಪ್ರಕರಣಗಳಲ್ಲಿ ಹೇಳಿದ್ದೇನೆ.
ಮರುವಿಚಾರಣೆ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಸಾಕ್ಷಿಯು ನೀಡಿದ ಸಾಕ್ಷವನ್ನು ಯಥಾವತ್ತು ದಾಖಲಿಸಿಕೊಳ್ಳಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ

ಓ ಎಸ್ **88/2014**
ಪಿ ಡಬ್ಲ್ಯೂ ಃ**3**

ದಿಃ **28-06-2018**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಶ್ರೀ ಆರ್ ಬಿ ಪಿ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ವಾದಿ ಪರ ಸಾಕ್ಷೀದಾರನಿದ್ದು, ನನ್ನ ಮುಖ್ಯ ಸಾಕ್ಷಿಗನುಗುಣವಾಗಿ ನ್ಯಾಯಾಲಯಕ್ಕೆ ಈಗ ನನ್ನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ಸಂಗತಿಗಳು ನನ್ನ ತಿಳುವಳಿಕೆ , ನಂಬಿಕೆ ಮತ್ತು ಮಾಹಿತಿ ಮೇರೆಗೆ ಸರಿ ಇರುತ್ತದೆ.

ತುಳಸಾಬಾಯಿ ಬರೆದುಕೊಟ್ಟ ಮರಣ ಶಾಸನ ಪತ್ರದಲ್ಲಿನ ನನ್ನ ಹಾಗೂ ಸಾಕ್ಷೀದಾರರ ಸಹಿಗಳನ್ನು ನೋಡಿದರೆ ಗುರುಸುತ್ತೇನೆ. ಸಾಕ್ಷಿ ಗುರುಜತಿಸಿದ ಸಹಿಯನ್ನು ನಿಪಿ - 18 (ಬಿ ) ಎಂದು ಈಗಾಗಲೇ ಗುರುತಿಸಿದೆ.

ಜರ್ನಾಧನ ಜಯರಾಮ ಪಾಟೀಲ ಇವರ ಸಹಿಯನ್ನು ನೋಡಿದರೆ ಗುರುಸುತ್ತೇನೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ - 18 (ಎ) ಎಂದು ಈಗಾಗಲೇ ಗುರುತಿಸಿದೆ. ಸದರಿ ದಾಖಲೆಗೆ ತುಳಸಾಬಾಯಿ ಹೆಬ್ಬಟ್ಟಿನ ಗುರುತನ್ನು ಹಾಕಿದ್ದಾರೆ.

ನ್ಯಾಯಾಲಯದ ಅವದಿ ಮುಗಿದ ಕಾರಣ ಸಾಕ್ಷಿ ವಿಚಾರಣೆಯನ್ನು ಮುಂದುಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಸಾಕ್ಷಿಯು ನೀಡಿದ ಸಾಕ್ಷವನ್ನು ಯಥಾವತ್ತು ದಾಖಲಿಸಿಕೊಳ್ಳಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ

Sri Janardhan Jayaram Patil and Sri Ranaba Gavadu Keloji are present and their affidavits in lieu of chief examination filed and examined as PW-2 and PW-3. Sri R V J adv for the Defendant permitted cross-examination.

PW-2 fully examined. Court time is over hence, cross-examination of PW-3 deferred by 26-07-2018.

Senior Civil Judge, Hukkeri

Sitting at Sankeshwar